ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-5, March - April 2026, Pp. 25-28
©*IIMRD*, Mysuru

IIMRD JOURNALS
www.iimrd.com

# ಕೃಷಿಯಲ್ಲಿ ಖುಷಿ ಕಂಡ ಕಾಯಕಯೋಗಿ ಎಂ ಬಿ ಹೂರಕೇರಿ

**ಡಾ. ತಿಪ್ಪೇಸ್ವಾಮಿ ಡಿ. ಎಸ್**
ಸಹ ಪ್ರಾಧ್ಯಾಪಕರು, ವಿ.ಎಂ.ಕೆ.ಎಸ್.ಆರ್. ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ.ಎಸ್. ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ

**ಸಾರಾಂಶ: (Abstract)**

*ಎಂ.ಬಿ. ಹೊರಕೇರಿ ಅವರ ಸರಳ ಜೀವನ, ಪರಿಶ್ರಮ ಮತ್ತು ಸಮಾಜ ಸೇವೆ ಕುರಿತು ಈ ಲೇಖನ ವಿವರಿಸುತ್ತದೆ. ಅವರು 'ಕಾಯಕವೇ ಕೈಲಾಸ' ಎಂಬ ತತ್ವವನ್ನು ಅನುಸರಿಸಿ ಕೆಲಸದಲ್ಲಿ ಸಂತೋಷವನ್ನು ಕಂಡ ಮಹಾನ್ ವ್ಯಕ್ತಿಯಾಗಿದ್ದರು. ಅವರು ಅತಿ ಸರಳ ಮತ್ತು ನಿಷ್ಠಾವಂತ ಜೀವನ ನಡೆಸಿದರು, ಅವರಿಗೆ ವೈಭವಕ್ಕಿಂತ ಕೆಲಸ ಮುಖ್ಯವಾಗಿತ್ತು. ಬಡವರು ಹಿಂದುಳಿದವರು ಮತ್ತು ಸಮಾಜದ ಕೆಳವರ್ಗದ ಜನರಿಗೆ ಸಹಾಯ ಮಾಡುವುದು ಅವರ ಪ್ರಮುಖ ಗುರಿಯಾಗಿತ್ತು.*

**ಮುಖ್ಯಪದಗಳು (Keywords):** *ಗ್ರಾಮೀಣ ಪ್ರದೇಶ, ಕೃಷಿ ಕ್ಷೇತ್ರ, ಕಾಯಕ ಯೋಗಿ, ಎಂ.ಬಿ. ಹೂರಕೇರಿ, ಡಾಣಕ ಶಿರೂರು.*

## ಪೀಠಿಕೆ

ಬಾದಾಮಿ ತಾಲೂಕಿನ ಸಣ್ಣ ಗ್ರಾಮ 'ಡಾಣಕ ಶಿರೂರು', ಕೃಷಿ ಆ ಗ್ರಾಮದ ಅವಿಭಾಜ್ಯ ಅಂಗ. ಆ ಗ್ರಾಮದ ಹೊರಕೇರಿ ಮನೆತನದ ಮಹಾದೇವಪ್ಪ ರಂಗಮ್ಮ ಪುತ್ರರಾಗಿ ಬಸಪ್ಪ ಮಹಾದೇವಪ್ಪ ಹೊರಕೇರಿಯವರು ಜೂನ್ 31, 1916 ರಲ್ಲಿ  ಜನಿಸಿದರು. ಕೃಷಿ ಕುಟುಂಬದಲ್ಲಿ ಹುಟ್ಟಿ ಬೆಳೆದ ಹೊರಕೇರಿಯವರು ಸ್ವಾಭಾವಿಕವಾಗಿ ಬಾಲ್ಯದಿಂದ ಒಕ್ಕಲುತನದ ಬಗ್ಗೆ ಆಸಕ್ತಿ ಹೊಂದಿದ್ದರು. ಹೊರಕೇರಿಯವರು ತಮ್ಮ ವಿದ್ಯಾಭ್ಯಾಸದ ನಂತರ  ಒಂದು ವರ್ಷ ಕೃಷಿ ತರಬೇತಿ ಪಡೆದರು.

ಹೊರಕೇರಿ ಅವರು ಹನ್ನೆರಡು ವರ್ಷ ಕೃಷಿ ಸಹಾಯಕರಾಗಿ ಸೇವೆ ಸಲ್ಲಿಸಿದರು. ಆದರೂ ಅವರಿಗೆ ತೃಪ್ತಿಯಾಗಲಿಲ್ಲ ಕೃಷಿಯಲ್ಲಿ ಪ್ರಾಯೋಗಿಕವಾಗಿ ಸಂಪೂರ್ಣವಾಗಿ ತೊಡಗಿಸಿಕೊಳ್ಳುವ ಉದ್ದೇಶದಿಂದ ಇವರು ಸರಕಾರಿ ಸೇವೆಗೆ ರಾಜೀನಾಮೆ ನೀಡಿ ಹೊರಬಂದರು. ಸಾಂಪ್ರದಾಯಿಕ ಒಕ್ಕಲುತನಕ್ಕೆ ನೂತನ ವೈಜ್ಞಾನಿಕ ಪದ್ಧತಿಯನ್ನು ಅಳವಡಿಸುವುದರಿಂದ ಹೆಚ್ಚು ಲಾಭಕರ ಎಂಬುದನ್ನು ಮನಗಂಡ ಹೊರಕೇರಿಯವರು ಹೊಸ ಹೊಸ ಪದ್ಧತಿಗಳನ್ನು ಪ್ರಯೋಗ ಮಾಡಿ ನೋಡಿದರು. ಫಲಿತಾಂಶದಲ್ಲಿ ತೃಪ್ತಿ ಕಂಡಾಗ ಜೊತೆಯವರಿಗೂ ಅದರ ಮಹತ್ವ ಕುರಿತು ಹೇಳಿದರು. ಗ್ರಾಮೀಣ ಕೃಷಿಕರನ್ನು ಸಂಶೋಧನಾ ಕೇಂದ್ರಗಳಿಗೆ ಕರೆದುಕೊಂಡು ಹೋಗಿ ಹೊಸ ವಿಧಾನಗಳ ಪರಿಚಯ ಮಾಡಿಸಿದ ಹಿರಿಮೆ ಇವರದು.

*Please cite this article as:* ತಿಪ್ಪೇಸ್ವಾಮಿ ಡಿ. ಎಸ್. (2026). ಕೃಷಿಯಲ್ಲಿ ಖುಷಿ ಕಂಡ ಕಾಯಕಯೋಗಿ ಎಂ ಬಿ ಹೂರಕೇರಿ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(5). ಪು.ಸಂ.* 25–28

ಸುತ್ತಲಿನ ರೈತರಿಗೆ ಇವರ ಸಲಹೆ ಮಾರ್ಗದರ್ಶನ ಹೆಚ್ಚಿನ ಸ್ಪೂರ್ತಿ ತಂದಿತು. ರೈತ ಸಮುದಾಯಕ್ಕೆ ಮಾದರಿಯಾಗಿ ಹೊರಕೇರಿ ರೂಪಗೊಳ್ಳುವಲ್ಲಿ ವಿಳಂಬವಾಗಲಿಲ್ಲ.

ಕೃಷಿಕರ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಯ ಸುಧಾರಣೆ ಅಗತ್ಯವೆಂಬುದನ್ನು ಮನಗಂಡ ಇವರು ಬಾದಾಮಿ ತಾಲೂಕಿನಲ್ಲಿ ಅನೇಕ ಸಹಕಾರ ಸಂಘಗಳನ್ನು ಸ್ಥಾಪಿಸಿದರು. 'ಹಳ್ಳಿಯಿಂದ ದಿಲ್ಲಿಗೆ' ಎಂಬಂತೆ ಜಿಲ್ಲೆಯಲ್ಲಿ ಕೃಷಿ ಸಹಕಾರ ಸಂಘದ ಅಧ್ಯಕ್ಷರಾದ ಹೊರಕೇರಿಯವರು ರಾಜ್ಯದ ವ್ಯವಸಾಯ ಸಹಕಾರಿ ಸಂಘದ ಅಧ್ಯಕ್ಷರಾಗಿ ಆರು ವರ್ಷ ಸೇವೆ ಸಲ್ಲಿಸಿದರು ರಾಷ್ಟ್ರೀಯ ಬೀಜ ಅಭಿವೃದ್ಧಿ ಮಂಡಳಿಯ ಸದಸ್ಯರಾಗಿದ್ದರು. ಹೊಸದಿಲ್ಲಿಯ ಅಖಿಲಭಾರತ ಕೃಷಿಕ ಸಮಾಜದಲ್ಲಿ ಕರ್ನಾಟಕವನ್ನು ಹದಿನೈದು ವರ್ಷಗಳ ಕಾಲ ಪ್ರತಿನಿಧಿಸಿದ ಕೀರ್ತಿ ಇವರದು.

1964ರಲ್ಲಿ ಭಾರತ ಸರ್ಕಾರದ ವತಿಯಿಂದ ಜರ್ಮನಿಗೆ ಭೇಟಿ ಕೊಟ್ಟಿದ್ದರು. ಅಲ್ಲಿನ ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿಗಳನ್ನು ಅಭ್ಯಾಸ ಮಾಡಿ ಸರಕಾರಕ್ಕೆ ವರದಿ ಒಪ್ಪಿಸಿದರು. 1982 ರಲ್ಲಿ ಗ್ರಾಮೀಣ ಜನತೆ ಹಾಗೂ ಅಭಿವೃದ್ಧಿ ವಿಷಯದ ಕುರಿತು ನಡೆದ ಅಂತರಾಷ್ಟ್ರೀಯ ವಿಚಾರ ಸಂಕೀರ್ಣದಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯಗಳನ್ನು ಎಲ್ಲರ ಮನ ಮುಟ್ಟುವಂತೆ ಮಂಡಿಸಿದರು.

ಬಿಜಾಪುರ ಜಿಲ್ಲೆಯ ಭೀಕರ ಬರಗಾಲದ ಸಂದರ್ಭದಲ್ಲಿ ಸರಕಾರದ ಯೋಜನೆಗಳಾದ ಮಲಪ್ರಭಾ ನದಿ ಏತ ನೀರಾವರಿ ಯೋಜನೆ, ಮಿಡತೆ ಹಾವಳಿ ನಿಯಂತ್ರಣ, ಭೂಮಿ ಉಳಿಮೆ ಯೋಜನೆಗಳನ್ನು ಜನಸಮುದಾಯದ ಹತ್ತಿರ ತೆಗೆದುಕೊಂಡು ಹೋಗುವುದು ಇವರ ಸಾಮರ್ಥ್ಯಕ್ಕೆ ಸಾವಾಲಾಗಿದ್ದವು ಅಂತ ಸಂದರ್ಭದಲ್ಲಿ 1942ರ ಯುದ್ಧ ನಂತರ ಕೆಲಸವಿಲ್ಲದೆ ಖಾಲಿ ನಿಂತಿದ್ದ ಜೈನ್‌ಗಾಲಿ ಟ್ರ್ಯಾಕ್ಟರ್‌ಗಳನ್ನು ಮುಂಬೈ ಸರಕಾರ ಉಳಿಮೆಗಾಗಿ ನಿಯೋಜಿಸಿತು. 1943 ರಲ್ಲಿ ನಾಲ್ಕು ಟ್ರ್ಯಾಕ್ಟರ್‌ಗಳನ್ನು ನಂದಿಕೇಶ್ವರಕ್ಕೆ ತರಿಸಿ ನಾಲ್ಕು ತಿಂಗಳು ಆ ಭಾಗದ 25,000 ಎಕರೆ ಭೂಮಿಯನ್ನು ಉಳುಮೆ ಮಾಡಿಸಿದ್ದು ಇವರ ವೃತ್ತಿ ಜೀವನದ ಮಹಾನ್ ಸಾಧನೆಗಳಾಗಿವೆ.

ಬಸಪ್ಪ ಎಂ.ಹೊರಕೇರಿ ಅವರದ್ದು ಕೃಷಿ ಮನೆತನವಾದ್ದರಿಂದ ತಮ್ಮ ನೂರಾರು ಎಕರೆ ಜಮೀನನ್ನು ಅಭಿವೃದ್ಧಿ ಪಡಿಸುವ ಅಗತ್ಯವಿತ್ತು. ಮಲಪ್ರಭಾ ನದಿ ನೀರನ್ನು ಬಳಸಿಕೊಂಡು ಆಧುನಿಕ ಬೇಸಾಯ ಮಾಡುವುದು ಅವರ ಉದ್ದೇಶವಾಗಿತ್ತು. ಹೀಗಾಗಿ 1955 ರಲ್ಲಿ ಸರಕಾರಿ ಕೆಲಸಕ್ಕೆ ರಾಜೀನಾಮೆ ನೀಡಿದರು. 52 ಸಾವಿರ ರೂಪಾಯಿಗಳ ಕ್ಯಾಟ ಪಿಲ್ಲರ್ ಟ್ರ್ಯಾಕ್ಟರ್ ಅನ್ನು ಅಮೆರಿಕಾದಿಂದ ಖರೀದಿಸಿದರಲ್ಲದೆ. ಅದರ ಉಪಯೋಗ ತೆಗೆದುಕೊಂಡರು. ಆ ಕಾಲದಲ್ಲಿ ಹೊರ ದೇಶದಿಂದ ಕರ್ನಾಟಕಕ್ಕೆ ಆಧುನಿಕ ಕೃಷಿ ಉಪಕರಣ ತಂದ ಪ್ರಥಮ ಶ್ರೇಯಸ್ಸು ಇವರದೆಂದರೆ ತಪ್ಪಾಗಲಾರದು, ಅಲ್ಲದೆ ಕೃಷಿಯಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿ ಯಶಸ್ವಿಯಾಗಿ ಇತರ ರೈತರಿಗೆ ಮಾದರಿಯದರು.

ಬಸಪ್ಪ ಹೊರಿಕೇರಿ ಅವರು 1975 ರಿಂದ 1977 ರವರೆಗೆ ಶಾಸಕರಾಗಿದ್ದರು. ತೀರಾ ಕಡಿಮೆ ಕಾಲಾವದಿಯಲ್ಲಿಯೇ ಮಹಾದಾಯಿ–ಮಲಪ್ರಭಾ ನದಿ ಜೋಡಣೆ, ಶಿವಯೋಗ ಮಂದಿರ, ಕಿರು ಜಲ ವಿದ್ಯುತ್ ಯೋಜನೆಗೆ ಇವರ ಮಹತ್ವಕಾಂಕ್ಷೆ ಯೋಜನೆಗಳು. ಇದನ್ನು ಮೊದಲ ಬಾರಿಗೆ ಶಾಸನಸಭೆಯಲ್ಲಿ ಪ್ರಸ್ತಾಪಿಸಿದ ಹಿರಿಮೆ ಇವರಿಗೆ ಸಲ್ಲುತ್ತದೆ.

ಇವರ ಹಿರಿಯ ಮಗ ಪ್ರೊ. ಮೃತ್ಯುಂಜಯ ಹೊರಕೇರಿ ಇವರು ಗುಲ್ಬರ್ಗ ವಿಶ್ವವಿದ್ಯಾಲಯದ ರಾಯಚೂರು ಸ್ನಾತಕೋಸ್ತರ ಕೇಂದ್ರದಲ್ಲಿ ಮತ್ತು ಸಂಡೂರು ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿ ಹಾಗೂ ವಿಶೇಷ ಅಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದಾರೆ ಇವರಿಗೆ ಇಬ್ಬರು ಮಕ್ಕಳಿದ್ದಾರೆ. ಮಗಳು ರಾಜೇಶ್ವರಿ ಎಂ.ಎಸ್ಸಿ ಕಂಪ್ಯೂಟರ್ ಸೈನ್ಸ್ ಪದವಿ ಪಡೆದಿದ್ದಾರೆ. ಮಗ ರಿಷಿಕುಮಾರ್ ಬಿ.ಇ. ಪದವಿ ಪಡೆದಿದ್ದಾರೆ. ಹೊರಕೇರಿಯವರ ಇನ್ನೊಬ್ಬ ಮಗನಾಗಿ ಮಕ್ಕಳಿಲ್ಲವಾದರೂ ಇವರನ್ನೇ ತಮ್ಮ ಮಕ್ಕಳೆಂದು ಭಾವಿಸಿ ಜೀವನ ಸಾಗಿಸುತ್ತಿದ್ದಾರೆ.

ಬಿಜಾಪುರ, ಬಾಗಲಕೋಟೆ ಮತ್ತು ಬಾದಾಮಿ ನಗರಗಳಲ್ಲಿ ಹೊರಕೇರಿ ಅವರ ಜನ ಸಂಪರ್ಕ, ಅಧಿಕಾರಿಗಳ ಸಂಪರ್ಕ, ಹೆಚ್ಚಾಗುತ್ತಾ ಸಾಗಿತು ಅವರು ಯಾರನ್ನು ನೋಯಿಸಿದೆ, ಯಾರಿಗೂ ಅನ್ಯಾಯ ಮಾಡದೇ, ಯಾವುದೇ ಸ್ವಾರ್ಥ ಬಯಸದ, ಸದಾ ಜನಪರ ಚಿಂತನೆಯಲ್ಲಿ ತೊಡಗಿಸಿಕೊಂಡ ಹೊರಕೇರಿಯವರ ವ್ಯಕ್ತಿತ್ವ ದಿನದಿಂದ ದಿನಕ್ಕೆ ಬೆಳೆಯ ಹತ್ತಿತು. ಜಿಲ್ಲೆಯ ದುರೀಣರಾದ ಬಿ.ಡಿ.ಜತ್ತಿ, ಎಸ್ ಆರ್ ಕಂಠಿ ಅವರ ಸಾಂಗತ್ಯ ಸಾಧ್ಯವಾಯಿತು. ತಾಲೂಕಿನ ಧುರೀಣರಾದ ಸುಳ್ಳದ ದೇಸಾಯಿಯವರು. ಜಾಲಿಹಾಳದ ಲಗಲಿ ಸಾಹುಕಾರರು, ಬಾದಾಮಿಯ ಕೆ.ಎಂ ಪಟ್ಟಣ ಶೆಟ್ಟರು ಕಟಗೇರಿಯಾ ಮುಖಾಸಿಯವರು ಮುಂತಾದವರು ಇವರ ಬಳಗದಲ್ಲಿದ್ದ ಮುತ್ಸದ್ದಿ ರಾಜಕಾರಣಿಗಳು.

ಸಾಹಿತ್ಯ ಚಟುವಟಿಕೆಯಲ್ಲಿ ಇವರನ್ನು ಕಂಡಾಗ ಆಕಾಶವಾಣಿ ಹಾಗೂ ದೂರದರ್ಶನಗಳಲ್ಲಿ ಗ್ರಾಮೀಣ ಸಲಹಾ ಮಂಡಳಿಯ ಸದಸ್ಯರಾಗಿ, ಸುಮಾರು ಒಂದು ದಶಕ ಸೇವೆ ಸಲ್ಲಿಸಿದರು. ಆಕಾಶವಾಣಿ ಕೃಷಿ ರಂಗ ಕಾರ್ಯಕ್ರಮದಲ್ಲಿ ಕಳೆದ 20 ವರ್ಷಗಳಿಂದ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಜನಸಾಮಾನ್ಯರ ಆಡು ಭಾಷೆಯಲ್ಲಿ ಜನಪ್ರಿಯವಾದ ಕೃಷಿ ಸಾಹಿತ್ಯ ರಚಿಸಿದ್ದಾರೆ. 20 ವರ್ಷಗಳ ಹಿಂದೆ ಪ್ರಕಟವಾದ ಇವರ ಬೇಸಿಗೆಯಲ್ಲಿ ಭೂಮಿಗೂ ಬೇಕು ವಿಶ್ರಾಂತಿ ಲೇಖನ ಇಂದಿಗೂ ಜನಪ್ರಿಯವಾಗಿದೆ. ವೈಜ್ಞಾನಿಕ ಕೃಷಿಯನ್ನು ಆಡು ಮಾತಿನಲ್ಲಿ ಸೊಗಸಾಗಿ ವಿವರಿಸಿ ಬರೆಯುವ ಹೊರಕೇರಿಯವರು ಸಾಹಿತ್ಯದ ಮೂಲಕವೂ ಕೃಷಿ ಸೇವೆ ಮಾಡಿದ್ದಾರೆ.

'ಜನಪದ ಸಾಹಿತ್ಯ' ಹಾಗೂ 'ಸಂಯೋಜಕ ಸರ್ವಜ್ಞ' ಎಂಬ ಪುಸ್ತಕಗಳನ್ನು ಪ್ರಕಾಶನ ಮಾಡಿದ ಹೊರಕೇರಿಯವರಿಗೆ ಗ್ರಾಮೀಣ ಜನತೆಯ ಹಾಡುಗಳು ನುಡಿಮುತ್ತುಗಳು ಹಾಗೂ ಚಟುವಟಿಕೆಗಳ ಬಗ್ಗೆ ತುಂಬಾ ಆಸಕ್ತಿ. ಇವೆಲ್ಲವನ್ನು ಸರ್ವಗಾನ ಮತ್ತು ಯೋಜನೆ ಎಂಬ ಪುಸ್ತಕದಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ.

ಎಂ.ಬಿ. ಹೊರಕೇರ ಅವರಿಗೆ 'ಕರ್ನಾಟಕ ರಾಜ್ಯ ಸಾರ್ವಜನಿಕ ಸೇವಾ ಪ್ರಶಸ್ತಿ, ನವದೆಹಲಿ ಫ್ರೆಂಚ್ ಷಿಪ್ ಫೋರಂ ಪ್ರಶಸ್ತಿ, ಅಮೆರಿಕನ್ ಬಯೋಗ್ರಫಿಕಲ್ ಸೊಸೈಟಿಯಿಂದ ಸನ್ಮಾನ, ಅಮೃತ ಮಹೋತ್ಸವದ ಅಂಗವಾಗಿ ಪುಣ್ಯಕೋಟಿ ಗ್ರಂಥ ಸಮರ್ಪಣೆ, ಬಾದಾಮಿ ತಾಲೂಕಿನ ನಾಗರಿಕರ ಸನ್ಮಾನ, 68ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸತ್ಕಾರ ಬಾಗಲಕೋಟೆ ಇತ್ಯಾದಿ ಸಂಘ–ಸಂಸ್ಥೆಗಳಿಂದ ಪ್ರಶಸ್ತಿ ಸನ್ಮಾನಗಳು ಪಡೆದುಕೊಂಡಿದ್ದಾರೆ.

ಕೃಷಿ ಮತ್ತು ಸಾಹಿತ್ಯದಲ್ಲಿ ಕೃಷಿ ಮಾಡಿದ ಎಂ. ಬಿ. ಹೊರಕೇರಿ ಸಾಹೇಬರು ಬಾದಾಮಿ ತಾಲೂಕಿನ ಅಭಿವೃದ್ಧಿಯ ಹರಿಕಾರ, ಶಿವಯೋಗ ಮಂದಿರದ ಶರಣ, ಮಹಾದಾಯಿ ಮಲಪ್ರಭಾ ನದಿ ಜೋಡಣೆಯ

ಕನಸುಗಾರ, ಶಿವಯೋಗ ಮಂದಿರದ ಕಿರು ಜಲ ವಿದ್ಯುತ್ ಯೋಜನೆಯ ರೂವಾರಿ, ಮಠ ಮಾನ್ಯಗಳ ಸದ್ಭಕ್ತಾ ಸಮಾಜ ಸೇವಕ ಜನಪದ ಸಾಹಿತಿ ಸರ್ವಜ್ಞ ಪ್ರಿಯ, ಆಧುನಿಕ ಕೃಷಿಯ ರೂವಾರಿ, ಕೃಷಿಯಲ್ಲಿ ಖುಷಿ ಕಂಡ ಕಾಯಕಯೋಗಿ, ದೀನ ದಲಿತರ ಆಶಾ ಕಿರಣ ಎಂದೂ ಮರೆಯದ ಮಂದಾರ, ಕರ್ನಾಟಕದ ಶುದ್ಧ ರಾಜಕಾರಣಿಗಳ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆಯಲು ಅರ್ಹನಾದ ಪುಣ್ಯ ಪುರುಷ.

**ಪರಾಮರ್ಶನ ಗ್ರಂಥಗಳು:**


- ಗಿದ್ದಿಮಠ, ಬಿ.ಎಸ್. (1988). *ಕನ್ನಡ ಜಾನಪದ ಗೀತೆಗಳು.* ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ,
- ಲಂಕೇಶ್ ಪತ್ರಿಕೆ (1993, ಮಾರ್ಚ್ 31)
- ಮಹಾಂತಗೌಡ ಅಮರಣ್ಣ ಗೌಡ. (2006). *ಡಾ. ಮೃತ್ಯುಂಜಯ ಹೊರಕೇರಿ ಯವರ ಸಮಗ್ರ ಸಾಹಿತ್ಯ ಒಂದು ಅಧ್ಯಾಯನ.* (ಪಿಎಚ್.ಡಿ. ಮಹಾ ಪ್ರಬಂಧ). ಗುಲ್ಬರ್ಗ ವಿಶ್ವವಿದ್ಯಾಲಯ.
- ಮಹಾಕೂಟ ಪಾಕ್ಷಿಕ ಪತ್ರಿಕೆ (2022, ಅಕ್ಟೋಬರ್ 1)
- ಪಾಟೀಲ, ಎಂ.ಎಸ್. (2006). *ಪ್ರತಿಭಾವಂತ ಸಂಸದೀಯ ಪಟು ಬಿ.ಎಂ. ಹೊರಕೇರಿ.* ಪ್ರಕಾಶ ಗ್ರಂಥಾಲಯ ಸಮಿತಿ, ಕರ್ನಾಟಕ ವಿಧಾನ ಮಂಡಲ, ವಿಧಾನ ಸೌಧ.
- ಸಣ್ಣಸಕ್ಕರೆ ಗೌಡರ, ವಿ.ಬಿ. (2019). ವಜ್ರದ ಹರಳು. ಎಸ್.ಎಲ್.ಎನ್ ಪಬ್ಲಿಕೇಷನ್.
- ಸಂಯುಕ್ತ ಕರ್ನಾಟಕ (1992, ಜೂನ್ 22).
- ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ (1980)
- ವೀರಣ್ಣ ರಾಜೂರ. (ಸಂ.) (1992). *ಜಾನಪದ ಸಾಹಿತ್ಯ ದರ್ಶನ.* ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ.